ಶ್ರೀ ಕೆ. ಗೋಪಾಲ ಪೂಜಾರಿ: ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ನನ್ನ ಕ್ಷೇತ್ರದಲ್ಲಿ ವಸತಿ ಶಾಲೆಯನ್ನು ಪ್ರಾರಂಭ ಮಾಡಲು ಅನುಮತಿ ನೀಡಿತ್ತು. ಅದಕ್ಕೆ ಬೇಕಾದ ಜಾಗವನ್ನೂ ಸಹ ನಾವು ಕಾಯ್ದಿರಿಸಿದ್ದೇವೆ. ಆ ಖಾಸಗಿ ಜಾಗಕ್ಕೆ ಬಾಡಿಗೆಯನ್ನು ಕೊಡಲೂ ಪ್ರಾರಂಭ ಮಾಡಿದ್ದೇವೆ. ಆದರೂ ಅದನ್ನು ಪ್ರಾರಂಭ ಮಾಡಲು ಸರ್ಕಾರ ಇಲ್ಲಿಯವರೆಗೂ ಯಾವ ರೀತಿಯಲ್ಲೂ ಮುಂದೆ ಬರಲಿಲ್ಲ. ಅದನ್ನು ಯಾವಾಗ ಮಾಡುತ್ತೀರಿ?

ಶ್ರೀ ಬಿ.ಎಸ್.ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಮಾಹಿತಿ ಪಡೆದು ನಂತರ ಉತ್ತರವನ್ನು ಹೇಳಲಾಗುವುದು.

ಹುಚ್ಚುನಾಯಿ ಕಡಿತಕ್ಕೆ ಲಸಿಕೆ ಪೂರೈಸುವುದು

32 (218) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಆಸ್ಪತ್ರೆಗಳಿಗೆ ಹುಚ್ಚುನಾಯಿ ಕಡಿತಕ್ಕೆ ಚುಚ್ಚುಮದ್ದನ್ನು ಖರೀದಿಸಲು ವಾರ್ಷಿಕ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು ; (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಆರ್. ಅಶೋಕ್ (ಆರೋಗ್ಯ ಸಚಿವರು)

ಅ) ಹುಚ್ಚುನಾಯಿ ಕಡಿತದ ಚುಚ್ಚುಮದ್ದನ್ನು ಖರೀದಿಸಲು ಪ್ರತ್ಯೇಕವಾಗಿ ಅನುದಾನವನ್ನು ನಿಗದಿಪಡಿಸಿರುವುದಿಲ್ಲ. 2006–07ನೇ ಸಾಲಿನಲ್ಲಿ ಸರ್ಕಾರಿ ಔಷಧ ಮಳಿಗೆಗೆ ಒಟ್ಟು ರೂ. 58.00 ಕೋಟಿ ಅನುದಾನ ಮತ್ತು ವೈದ್ಯಕೀಯ ಶಿಕ್ಷಣ ಅಡಿಯಲ್ಲಿ 18.56 ಕೋಟಿ ರೂ. ಬಿಡುಗಡೆಯಾಗಿದೆ. ಈ ಅನುದಾನದಿಂದ ರಾಜ್ಯದ ವಿವಿಧ ಆಸ್ಪತ್ರೆಗಳಿಂದ ಬಂದಂತ ಬೇಡಿಕೆಗೆ ಅನುಗುಣವಾಗಿ ರೂ. 3,39,75,076/–ಗಳ ಹುಚ್ಚುನಾಯಿ ಕಡಿತದ (ರ್ಯಾಬಿಪೂರ್) ಔಷಧಿಯನ್ನು ಖರೀದಿಸಿ ವಿತರಿಸಲಾಗಿದೆ.

(ಜಿಲ್ಲಾವಾರು ಸರಬರಾಜು ಮಾಡಿರುವ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ)

ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಇವರ ಪ್ರಶ್ನೆ ಸಂಖ್ಯೆ: 218ಕ್ಕೆ ಭಾಗಶಃ ಉತ್ತರ

ಅನುಬಂಧ

ಜಿಲ್ಲೆಯ ಹೆಸರು — ಜಿಲ್ಲಾವಾರು ಸರಬರಾಜು ಮಾಡಿರುವ ಔಷಧಿಯ ಪ್ರಮಾಣ ಮತ್ತು ಮೊತ್ತ ರೂ.ಗಳಲ್ಲಿ

		2005–06		2006–07			
		ಪ್ರಮಾಣ ವಯಲ್ ಗಳಲ್ಲಿ	ದರ 207.41/– ಮೊತ್ತ	ಪ್ರಮಾಣ ವಯಲ್ ಗಳಲ್ಲಿ	ದರ 169.50/– ಮೊತ್ತ	ಪ್ರಮಾಣ	ದರ 207.41/– ಮೊತ್ತ
1.	ಬೆಂಗಳೂರು ಗ್ರಾಂ.	4725	980012–00	5050	855975–00	1750	362967–00
2.	ಬೆಂಗಳೂರು ನಗರ	24213	5022018–00	19860	3366270–00	6870	1424907–00
3.	ಬಾಗಲಕೋಟೆ	3600	746676–00	2420	410190–00	930	192891–00
4.	ಬೆಳಗಾಂ	10325	2141508–00	8900	1508550–00	2650	549636–00
5.	ಬಳ್ಳಾರಿ	3550	736305–00	2480	420360–00	2040	423116–00
6.	ಬಿಜಾಪುರ	7225	1560760–00	3980	674610–00	1670	346374–00
7.	ಬೀದರ್	5025	1042235–00	2310	391545–00	710	147261–00
8.	ಚಾಮರಾಜನಗರ	6350	1317053–00	2920	494940–00	2480	514376–00
9.	ಚಿಕ್ಕಮಂಗಳೂರು	4675	969641–00	2940	498330–00	2790	578674–00
10.	ಚಿತ್ರದುರ್ಗ	8125	1685206–00	3560	603420–00	2705	561044–00
11.	ದಾವಣಗೆರೆ	7005	1452907–00	2180	369510–00	1030	213632–00

12.	ಧಾರವಾಡ	4300	891863–00	1880	318660–00	1660	344300–00
13.	ಗದಗ್	4750	985197–00	2000	339000–00	1800	373338–00
14.	ಗುಲ್ಬರ್ಗ	4969	1030620–00	1480	250860–00	1270	263410–00
15.	ಹಾಸನ	11725	2431882–00	7081	1200229–00	4845	1004901–00
16.	ಹಾವೇರಿ	3000	622230–00	2600	440700–00	2300	477043–00
17.	ಕಾರವಾರ	7725	1602242–00	3420	579690–00	2405	498821–00
18.	ಕೋಲಾರ	16450	3411894–00	5560	942420–00	7530	1561797–00
19.	ಕೊಪ್ಪಳ	5950	1234089–00	2360	400020–00	2180	452153–00
20.	ಮಡಿಕೇರಿ	8125	1685206–00	4460	755970–00	3110	645045–00
21.	ಮಂಗಳೂರು	12488	25901360–00	1639	277970–00	1180	244743–00
22.	ಮಂಡ್ಯ	7725	1602242–00	3423	580198–00	2850	591118–00
23.	ಮೈಸೂರು	27797	5765375–00	15800	2678100–00	4555	944753–00
24.	ರಾಯಚೂರು	5475	1135569–00	1260	213570–00	2070	429338–00
25.	ಶಿವಮೊಗ್ಗ	8425	1747429–00	6197	1050391–00	4470	927123–00
26.	ತುಮಕೂರು	9825	2037803–00	5220	884790–00	4090	848307–00
27.	ಉಡುಪಿ	5475	1135569–00	2760	467820–00	2070	429338–00
28.	ಯಾದಗಿರ್	2925	606674–00	1260	213570–00	990	205335–00
	ಒಟ್ಟು	**232247**	**48170350**	**125000**	**21187500**	**75000**	**15555750**
					@ Rs. 169.40	**125000**	**21187500**
					@ Rs. 207.41	**75000**	**15555750**
					Total Vial	**200000**	**36743250**

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಈ ಬಾರಿ ಕಳೆದ ಬಾರಿಗಿಂತ ಬಹಳ ಕಡಿಮೆ ಔಷಧವನ್ನು ಸಪ್ಲೈ ಮಾಡಿದ್ದಾರೆ. 2005-06ರಲ್ಲಿ 5,475 ವಯಲ್‌ಗಳನ್ನು ಕೊಟ್ಟಿದ್ದರೆ, ಈ ವರ್ಷ ಕೇವಲ 2,760 ವಯಲ್‌ಗಳನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಬಹಳ ಸಮಸ್ಯೆ ಉದ್ಭವವಾಗಿದೆ. ಹುಚ್ಚುನಾಯಿ ಕಡಿತದಿಂದ ಕೆಲವರು ನಿಧನ ಹೊಂದಿದ್ದಾರೆ. ನಾನು District Medical Officer ಹತ್ತಿರ ಕೇಳಿದಾಗ ಅವರು ಔಷಧಿ ಸಪ್ಲೈ ಇಲ್ಲ ಎಂದು ಹೇಳುತ್ತಾರೆ. ಅದಕ್ಕಾಗಿ ನೀವು ಹೆಚ್ಚು ಸಪ್ಲೈಯನ್ನು ಮಾಡಿ, ಎಲ್ಲ ಐಹೆಚ್‌ಸಿಗಳಲ್ಲಿ ಹೆಚ್ಚಿನ ಸ್ಟಾಕನ್ನು ಇಡುವ ವ್ಯವಸ್ಥೆಯಾಗಬೇಕು. ಇದನ್ನು ನಿಯಂತ್ರಣ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ? ಔಷಧದ ವಿಷಯ ನಂತರದ್ದು ಆಯಿತು. ಅದನ್ನು ತಡೆಗಟ್ಟಲು ಏನು ಕ್ರಮವನ್ನು ಕೈಗೊಂಡಿದ್ದೀರಿ?

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೆ, ರ್ಯಾಬಿಪೂರ್ ಔಷಧಿಯನ್ನು ಅಂದರೆ ಹುಚ್ಚುನಾಯಿ ಕಡಿದಾಗ ಮನುಷ್ಯರಿಗೆ ನೀಡುವಂಥ ಔಷಧಿಯನ್ನು ಎಲ್ಲ ಕಡೆಗಳಲ್ಲಿ ಸರಿಯಾದಂಥ ರೀತಿಯಲ್ಲಿ ವಿತರಣೆ ಮಾಡಬೇಕು ಎಂದು ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದರೂ ಸಹ ಕೆಲವು ಕಡೆಗಳಲ್ಲಿ ತೊಂದರೆಯಾಗಿದೆ. ತಾವು ಹೇಳುತ್ತಿರುವಂಥ ಉಡುಪಿ ಜಿಲ್ಲೆಗೆ ನಾವು ಈಗಾಗಲೇ ಸುಮಾರು 15 ಲಕ್ಷ ರೂ.ಗಳ ಮೆಡಿಸನ್‌ಅನ್ನು ಈಗಾಗಲೇ ಕೊಟ್ಟಿದ್ದೇವೆ. 9 ಲಕ್ಷ ರೂ.ಗಳ ಮೆಡಿಸನ್‌ಅನ್ನು ನಮ್ಮ Drug Logistics Societyಯಿಂದಲೇ ಕೊಟ್ಟಿದ್ದೇವೆ, ಉಳಿದ 6 ಲಕ್ಷ ರೂ.ಗಳನ್ನು ಅಲ್ಲಿನ users amountನಿಂದ ಖರ್ಚು ಮಾಡಿದ್ದಾರೆ. ಒಟ್ಟಾರೆಯಾಗಿ ಅಲ್ಲಿಗೆ ನಾವು 15 ಲಕ್ಷ ರೂ.ಗಳನ್ನು ನಾಯಿ ಕಡಿತದ ಔಷಧಿಗಾಗಿ ಅಲ್ಲಿ ನಾವು ಕೊಟ್ಟಿದ್ದೇವೆ. ಆದರೆ ಕೆಲವು ಕಡೆಗಳಲ್ಲಿ ಆಸ್ಪತ್ರೆಗಳ ವೈದ್ಯರು, ನಮ್ಮಲ್ಲಿ ಔಷಧಿಯಿಲ್ಲ ಎನ್ನುವ ಸಬೂಬನ್ನು ಹೇಳುತ್ತಾರೆ ಎನ್ನುವುದು ನಮ್ಮ ಗಮನಕ್ಕೆ ಬಂದ ಮೇಲೆ ನಾವು 2 ತಿಂಗಳ ಹಿಂದೆಯೇ ಒಂದು circularಅನ್ನು ಕಳುಹಿಸಿದ್ದೇವೆ. ಹುಚ್ಚು ನಾಯಿ ಕಚ್ಚಿದಂಥ ಸಂದರ್ಭ ಬಂದಾಗ, ಅಂಥವರನ್ನು ಯಾವುದೇ ಸಂದರ್ಭದಲ್ಲಿ ಔಷಧಿಯಿಲ್ಲ ಎಂದು ಹೇಳಿ ವಾಪಸ್ಸು ಕಳುಹಿಸಬಾರದು, ಅಲ್ಲಿರತಕ್ಕಂಥ users amount ಅನ್ನು ಖರ್ಚು ಮಾಡಬೇಕು ಎಂದು ಹೇಳಿದ್ದೇವೆ. ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿರುವಂಥ ಸರ್ಕಾರೀ ಆಸ್ಪತ್ರೆಗಳಲ್ಲಿ ಸಾಕಷ್ಟು ಅಂಥ ಅಮೌಂಟ್ ಇದೆ. ಕೆಲವು ಕಡೆಗಳಲ್ಲಿ 3 ಕೋಟಿ ರೂ.ಗಳವರೆಗೂ ಆ ಅಮೌಂಟ್ ಇದೆ. ಆ

ಹಣವನ್ನು ಈ ಔಷಧಿ ಖರೀದಿಗೋಸ್ಕರ ಉಪಯೋಗ ಮಾಡಬೇಕು ಎನ್ನುವ circularಅನ್ನು ಕಳುಹಿಸಿದ್ದೇವೆ. ಈಗಾಗಲೇ ಬೆಂಗಳೂರಿನಲ್ಲಿ ಈ ತರಹ ಆಗಿದ್ದ ಘಟನೆಯನ್ನು ನಾವು ನೋಡಿದ್ದೇವೆ. ಇನ್ನು ಮುಂದೆ ಎಲ್ಲೂ ಸಹ ಈ ತರಹ ಘಟನೆ ಆಗಬಾರದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಯಾವ್ಯಾವ ಜಿಲ್ಲೆಯಲ್ಲಿ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟು ಹುಚ್ಚು ನಾಯಿಗಳಿವೆ? ಈ ಹುಚ್ಚು ನಾಯಿಗಳು ಯಾವ್ಯಾವ ರೀತಿ, ಯಾವ್ಯಾವ ದರ್ಜೆಯ ನಾಯಿಗಳು ಇರುತ್ತವೆ ಎನ್ನತಕ್ಕ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಎರಡನೆಯದಾಗಿ, ಬೆಂಗಳೂರು ನಗರದಲ್ಲಿ 20 ನಾಯಿಗಳು ಒಂದು ಹೆಣ್ಣು ಮಗುವಿನ ಮಾಂಸವನ್ನು ರಸ್ತೆಯಲ್ಲಿಯೇ ಕಿತ್ತು ತಿಂದ ಘಟನೆ ಇತಿಹಾಸಲ್ಲೇ ಈ ತರಹ ನಡೆದಿಲ್ಲ. ಇದು ಎಲ್ಲಿಯೂ ಯಾವ ಚರಿತ್ರೆಯಲ್ಲೂ ನಡೆದಿರಲ್ಲಿಲ್ಲ. ಈ ಪರಿಸ್ಥಿತಿಯಾಗಿರುವಾಗ, ನಾನು ನಿಜಕ್ಕೂ ವೈಯಕ್ತಿಕವಾಗಿ ನಿಮ್ಮನ್ನು ದೂಷಿಸುತ್ತಿಲ್ಲ. ನಮ್ಮ ರಾಜ್ಯದ ಜನತೆ ಯಾರಾದರೂ ತಲೆ ತಗ್ಗಿಸಲೇಬೇಕು. ಈ ಘಟನೆ ಬೇರೆ ದೇಶದಲ್ಲಿ ನಡೆದಿದ್ದರೆ ಅಲ್ಲಿನ ಸರ್ಕಾರ ರಾಜೀನಾಮೆ ಕೊಡುತ್ತಿತ್ತು. ನಮ್ಮ ದೇಶದಲ್ಲಿ ಈ ರೀತಿ ಎಂದೂ ನಡೆದಿಲ್ಲ. ಬೆಂಗಳೂರು ನಗರದಲ್ಲಿ ಒಂದು ಹೆಣ್ಣು ಮಗುವನ್ನು ಕಚ್ಚಿ ಮಾಂಸವನ್ನು ರಸ್ತೆಯಲ್ಲಿ ಒಂದೊಂದು ನಾಯಿ ತಿನ್ನುತ್ತಿರುವಂಥ ಈ ವ್ಯವಸ್ಥೆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಇದು ಆಗದ ರೀತಿ ಮಾಡುವಂಥ ವ್ಯವಸ್ಥೆ ಏನಿದೆ? ಇದರ ಬಗ್ಗೆ ತಾವು ಬಹಳ ಪ್ರಮುಖವಾಗಿ ಹೇಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಅಶೋಕ್‌ರವರೆ, ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಯಬೇಕು. ಎಲ್ಲರೂ ಇದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಾ ಹೋದರೆ ಆಗುವುದಿಲ್ಲ. ಈಗ ಅವರು ಉತ್ತರ ಹೇಳಲಿ.

(ಗೊಂದಲ)

ಶ್ರೀ ನೆ.ಲ. ನರೇಂದ್ರ ಬಾಬು: ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ...

ಅಧ್ಯಕ್ಷರು: ನಾನು ಅವರನ್ನು ಕರೆದಿಲ್ಲ. ನೀವು ಉತ್ತರ ಹೇಳಿ. ಉತ್ತರ ಹೇಳುವುದಕ್ಕೆ ನಾನು ಮಂತ್ರಿಗಳನ್ನು ಕರೆದಿದ್ದೇನೆ. ನಾನು ಅವರಿಗೆ ಅವಕಾಶ

ಕೊಟ್ಟಿಲ್ಲ. ಅವರು ಎದ್ದು ನಿಂತು ಕೇಳುತ್ತಾರೆ, ಏನು ಮಾಡುವುದಕ್ಕಾಗುತ್ತದೆ? ನಿಮ್ಮನ್ನು ಕರೆದಿದ್ದೇನೆ. ನೇರವಾಗಿ ಉತ್ತರ ಹೇಳಿ.

ಶ್ರೀ ನೆ.ಲ. ನರೇಂದ್ರ ಬಾಬು: ಸ್ವಾಮಿ, ನಾಯಿಗಳ ಕಾಟ ಜಾಸ್ತಿಯಾಗಿದೆ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ತಮಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು: ಚುಕ್ಕೆ ಗುರುತಿನ ಪ್ರಶ್ನೆಗೂ ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶವಿಲ್ಲವೇ?

ಅಧ್ಯಕ್ಷರು: ಪ್ರಶ್ನೋತ್ತರವನ್ನು ಒಂದು ಗಂಟೆಯಲ್ಲಿ ಮುಗಿಸಬೇಕು.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ 2003ರ ಗಣತಿ ಪ್ರಕಾರ 56,154 ಬೀದಿ ನಾಯಿಗಳಿವೆ ಎಂದು People for animals ಸಂಸ್ಥೆಯವರು ನಡೆಸಿರುವ ಸಮೀಕ್ಷೆಯಿಂದ ನಮಗೆ ತಿಳಿದು ಬಂದಿದೆ. ಅದಾದ ಮೇಲೆ, ಬೀದಿ ನಾಯಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆನ್ನುವ ದೃಷ್ಟಿಯಿಂದ ಇದಕ್ಕೆ ಸಂತಾನ ಹರಣ ಶಸ್ತ್ರಚಿಕಿತ್ಸೆ ಮಾಡುವ ಮುಖಾಂತರ ಇದರ ಸಂಖ್ಯೆಯನ್ನು ಕಡಿಮೆ ಮಾಡಬೇಕೆನ್ನುವ ದೃಷ್ಟಿಯಿಂದ ಈಗಾಗಲೇ ಬೆಂಗಳೂರು ಮಹಾನಗರ ಪಾಲಿಕೆ 4 ಸಂಸ್ಥೆಗಳನ್ನು ಗುರುತು ಮಾಡಿ ಇದನ್ನು ಮಾಡುತ್ತಿದೆ. ಇದಾದಮೇಲೆ, ಈಗಿನ ಗಣತಿ ಪ್ರಕಾರ ಶೇಕಡಾ 21ರಷ್ಟು ಕಡಿಮೆಯಾಗಿದೆ ಎಂಬ ಮಾಹಿತಿ ನಮಗೆ ಬಂದಿದೆ. ಮತ್ತೆ, ತಾವು ಹೇಳಿದ ಹಾಗೆ, ಇದನ್ನು ಬಹಳ ಯಶಸ್ವಿಯಾಗಿ ತಡೆಗಟ್ಟುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮ ತೆಗೆದುಕೊಳ್ಳುವುದಕ್ಕೆ ಬೆಂಗಳೂರು ಮಹಾನಗರ ಪಾಲಿಕೆಗೆ ನಾವು ಆದೇಶ ಮಾಡಿದ್ದೇವೆ. ಅಷ್ಟಿದ್ದರೂ ಸಹ, 2001ನೇ ಸಾಲಿನಂತೆ, Prevention of Cruelty to Animals Act, 1960 ಮತ್ತು ಅದರಡಿ ಇರುವಂಥ ABC Dogs Rules 2001 ಕೇಂದ್ರ ಸರ್ಕಾರದ ಏನು ನಿಯಮವಿದೆ, ಈ Act ಪ್ರಕಾರ ಆರೋಗ್ಯವಂತ ನಾಯಿಗಳನ್ನು ಸಾಯಿಸುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ, ಸಂತಾನ ಹರಣ ಮಾಡುವ ಮುಖಾಂತರ ಇದನ್ನು ಕಡಿಮೆ ಮಾಡಬೇಕೆನ್ನುವ ಉದ್ದೇಶದಿಂದ ನಾವು ಈಗಾಗಲೇ ಮಾಡಿದ್ದೇವೆ. ಮೊನ್ನೆ ಚಂದ್ರಾ ಲೇಔಟ್‌ನಲ್ಲಿ ಆದಂಥ ಘಟನೆ ನಿಜಕ್ಕೂ ನಮಗೆಲ್ಲ ನೋವಿನ ಸಂಗತಿಯಾಗಿದೆ. ಅದಾದಮೇಲೆ, ರಾತ್ರಿ ಪಾಳಿಯಲ್ಲಿ ವಿಶೇಷ ಕಾರ್ಯಾಚರಣೆ ಮಾಡಿ ಚಂದ್ರಾ ಬಡಾವಣೆಯಲ್ಲಿ ಸುಮಾರು 1,274 ಸಮಸ್ಯಾತ್ಮಕ ನಾಯಿಗಳನ್ನು ದಯಾ ಮರಣಕ್ಕೊಳ

ಪಡಿಸುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದು, ಇದನ್ನು 4 ಸರ್ಕಾರೇತರ ಸಂಸ್ಥೆಗಳು ಮಾಡುತ್ತಿವೆ. 18 ವಾಹನಗಳು ಬೆಂಗಳೂರು ಮಹಾ ನಗರ ಪಾಲಿಕೆಯಲ್ಲಿ ನಾಯಿಗಳನ್ನು ನಿಯಂತ್ರಣ ಮಾಡುವುದಕ್ಕೋಸ್ಕರ ಯಾವ ನಾಯಿಗಳು ಆರೋಗ್ಯವಿಲ್ಲ ಅಂದರೆ accident ಆಗಿರುವಂಥವು ಅಥವಾ ಕಾಯಿಲೆ ಬಂದಂಥ ನಾಯಿಗಳನ್ನು ಕೊಲ್ಲಬೇಕೆಂಬ ಆದೇಶವನ್ನು ಮಾಡಲಾಗಿದೆ. ಇದರಿಂದ ನಿಯಂತ್ರಣ ಮಾಡಬೇಕೆನ್ನುವ ಉದ್ದೇಶವಿದೆ. ಇಡೀ ರಾಜ್ಯದಲ್ಲಿ ಮುಂದಿನ ವರ್ಷದ ಆಯವ್ಯಯದಲ್ಲಿ ಸುಮಾರು 9 ಕೋಟಿ ರೂಪಾಯಿಗಳ ಈ ರೇಬಿ ಪೂರ್ ಔಷಧಿಗಳನ್ನು purchase ಮಾಡಬೇಕೆಂದು ಈಗಾಗಲೇ ನಿರ್ಧಾರ ಮಾಡಿದ್ದೇವೆ. ಈಗ ಸುಮಾರು 50,000 vials ಔಷಧಿ ಸರ್ಕಾರದ logisticನಲ್ಲಿ stock ಇದೆ. ಅದನ್ನು ಸರಿಯಾಗಿ ವಿತರಣೆಯಾಗುವ ರೀತಿಯಲ್ಲಿ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ವಿ. ಸೋಮಣ್ಣ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಿ. (ಗೊಂದಲ)

ಅಧ್ಯಕ್ಷರು: ದಯಮಾಡಿ, ಕುಳಿತುಕೊಳ್ಳಬೇಕು. ದಯಮಾಡಿ, ಕೇಳಿ. ಸುಮ್ಮನೆ ಎಲ್ಲರೂ ಹೀಗೆ ಎದ್ದು ನಿಂತುಕೊಂಡರೆ ಹೇಗೆ? (ಗೊಂದಲ) ಇದರ ಬಗ್ಗೆ ಚರ್ಚೆಯಾಗಬೇಕೆಂದಾದರೆ, ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. (ಗೊಂದಲ) ದಯಮಾಡಿ, ಕುಳಿತುಕೊಳ್ಳಿ. ಈ ತರಹ ಮಾಡಿದರೆ ಏನೂ ಮಾಡುವುದಕ್ಕಾಗುವುದಿಲ್ಲ. ದಯಮಾಡಿ, ನೀವೆಲ್ಲ ಕುಳಿತುಕೊಳ್ಳಿ. (ಗೊಂದಲ) ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಹಿರಿಯ ಸದಸ್ಯರಿದ್ದೀರಿ, ಕುಳಿತುಕೊಳ್ಳಿ. ದಯಮಾಡಿ, ನೀವು ಕುಳಿತುಕೊಳ್ಳಿ. (ಗೊಂದಲ) ಎಲ್ಲರೂ ಎದ್ದು ನಿಂತುಕೊಂಡು ಈ ತರಹ ಕಲಾಪ ನಡೆಯದ ಹಾಗೆ ಮಾಡಿದರೆ ಏನೂ ಮಾಡುವುದಕ್ಕಾಗುವುದಿಲ್ಲ. (ಗೊಂದಲ) ಒಂದು ಗಂಟೆಯೊಳಗಡೆ ನಾನು ಪ್ರಶ್ನೋತ್ತರ ಕಲಾಪವನ್ನು ಮುಗಿಸಬೇಕು. ಬೇಕಾದರೆ, ಇದಕ್ಕೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಒಂದು ಗಂಟೆಯೊಳಗೆ ಪ್ರಶ್ನೋತ್ತರವನ್ನು ಮುಗಿಸಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ..ಇದು ಬಹಳ ಪ್ರಮುಖವಾದ ವಿಚಾರ. ಒಂದು ಮಗುವನ್ನು ನಾಯಿಗಳು ಕಿತ್ತು ತಿಂದಿವೆ.

(ಗೊಂದಲ)

ಅಧ್ಯಕ್ಷರು: ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

(ಈ ಹಂತದಲ್ಲಿ ವಾಟಾಳ್ ಪಕ್ಷದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಹಿಂಬಾಕಿ ಹುದ್ದೆಗಳ ಭರ್ತಿಯಲ್ಲಿ ಆಗುತ್ತಿರುವ ವಿಳಂಬ

35 (185) ಶ್ರೀ ಧ್ರುವನಾರಾಯಣ ಆರ್. ಸಂತೇಮರಳ್ಳಿ: ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಹಲವಾರು ಸಂಘ ಸಂಸ್ಥೆಗಳು ಹಿಂಬಾಕಿ ಹುದ್ದೆಗಳ ಭತಿ ಪ್ರಕ್ರಿಯೆ ಕುಂಠಿತಗೊಂಡಿದೆ ಎಂದು ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಪ್ರಸಕ್ತ ಸರ್ಕಾರ ಅಧಿಕಾರ ವಹಿಸಿಕೊಂಡಂದಿನಿಂದ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರ್ತಿಸಿ ಪ್ರಕಟಣೆ ಹೊರಡಿಸಿ ಭರ್ತಿ ಮಾಡಲಾಗಿದೆ; (ಅಂಕಿಅಂಶಗಳ ಸಮೇತ ವಿವರ ನೀಡುವುದು) ;

ಇ) ಹಿಂಬಾಕಿ ಹುದ್ದೆಗಳ ನೇಮಕಾತಿಯಲ್ಲಿ ಆಗುತ್ತಿರುವ ಮಂದಗತಿಗೆ ಇಲಾಖೆಗಳ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವಲ್ಲಿ ಸರ್ಕಾರಕ್ಕಿರುವ ತೊಂದರೆಗಳೇನು ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ಆ) ಬ್ಯಾಕ್‌ಲಾಗ್ ಹುದ್ದೆಗಳನ್ನು ದಿನಾಂಕ: 21-11-2001ರ ಸರ್ಕಾರಿ ಅಧಿಸೂಚನೆ ಪ್ರಕಾರ ಗುರುತಿಸಿ ಭರ್ತಿ ಮಾಡಲಾಗುತ್ತಿದೆ. ಇದೊಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ. ಪ್ರಸಕ್ತ ಸರ್ಕಾರ ಅಧಿಕಾರ ವಹಿಸಿಕೊಂಡಂದಿನಿಂದ ಡಿಸೆಂಬರ್ 2006ರವರೆಗೆ 186 ಹೊಸ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ. ಈ ಅವಧಿಯಲ್ಲಿ ಪ್ರಕಟಣೆಗೆ ಬಾಕಿ ಇದ್ದ ಹುದ್ದೆಗಳಲ್ಲಿ 478 ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ). ಇಲ್ಲಿಯವರೆಗೆ 13615 ಅಭ್ಯರ್ಥಿಗಳು ಹಿಂಬಾಕಿ ಹುದ್ದೆಗಳ ಎದುರು ಹಾಜರಾಗಿರುತ್ತಾರೆ.

ಇ) ವಿಳಂಬವಾಗಿರುವುದಿಲ್ಲ. ಆದುದರಿಂದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.